## ಕರ್ನಾಟಕ ಸರ್ಕಾರ

ಸಂ: ಆಇ 157 ವೆಚ್ಚ 11/2020 ಕರ್ನಾಟಕ ಸರ್ಕಾರದ ಸಚಿವಾಲ

ಆರ್ಥಿಕ ಇಲಾಖೆ,

ಬೆಂಗಳೂರು, ದಿನಾಂಕ: 18.06.20

## ತಿದ್ದುಪಡಿ ಆದೇಶ

ವಿಷಯ: ಕೋವಿಡ್-19 ಸಾಂಕ್ರಾಮಿಕ ರೋಗವನ್ನು ತಡೆಗಟ್ಟುವ ಸಂಬಂಧ ರಾಜ್ಯದ ಎಲ್ಲಾ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರನ್ನು ವೈದ್ಯಕೀಯ ವಿಮ ಅಡಿಯಲ್ಲಿ ಒಳಪಡಿಸುವ ಬಗ್ಗೆ.

ಉಲ್ಲೇಖ: ಸರ್ಕಾರದ ಆದೇಶ ಸಂಖ್ಯೆ: ಆಇ 114 ವೆಚ್ಚ-11/2020, ದಿನಾಂಕ: 02.05.2020.

*****

ಕೋವಿಡ್-19 ಸಾಂಕ್ರಾಮಿಕ ರೋಗವನ್ನು ತಡೆಗಟ್ಟುವ ಸಂಬಂಧ ರಾಜ್ಯದ ಎಲ್ಲಾ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರನ್ನು ವೈದ್ಯಕೀಯ ಪರಿಹಾರವನ್ನು ಒಳಪಡಿಸುವ ಸಂಬಂಧ ಆರ್ಥಿಕ ಇಲಾಖೆ ಹೊರಡಿಸಿರುವ ಸರ್ಕಾರದ ಆದೇಶ ಸಂಖ್ಯೆ: ಆಇ 114 ವೆಚ್ಚ-11/2020, ದಿನಾಂಕ: 02.05.2020 ರಲ್ಲಿ ಹೇಳಲಾದ

*"ಈ ಮೂರು ವರ್ಗಗಳಿಗೆ ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ ಯೋಜನೆಯ ಮಾರ್ಗಸೂಚಿಗಳಂತೆ ಕೋವಿಡ್ ಕೆಲಸದಲ್ಲಿ ಪಾಲ್ಗೊಂಡಿದ್ದು ಕೋವಿಡ್-19 ರೋಗದಿಂದ ಮೃತರಾದಲ್ಲಿ ಈ ಕೆಲಸದಲ್ಲಿರುವವರಿಗೆ ಮನೋಸ್ಥೈರ್ಯ ಹೆಚ್ಚಿಸಲು ರೂ.30.00ಲಕ್ಷ ಪರಿಹಾರ ಒದಗಿಸಲು ಸರ್ಕಾರವು ಮಂಜೂರಾತಿ ನೀಡಿ ಆದೇಶಿಸಿದೆ".*

ಎಂಬುದರ ಬದಲಾಗಿ ಈ ಕೆಳಕಂಡಂತೆ ತಿದ್ದಿ ಓದಿಕೊಳ್ಳುವುದು.

*"ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ ಯೋಜನೆಯಡಿ ಈ ಮೂರು ವರ್ಗಗಳ ಅಧಿಕಾರಿ/ ಸಿಬ್ಬಂದಿ/ ನೌಕರರನ್ನು ಸೇರಿಸಿಲ್ಲದ ಕಾರಣ, ರಾಜ್ಯ ಸರ್ಕಾರವು ತನ್ನ ಅನುದಾನದಿಂದಲೇ ಈ ವರ್ಗದ ಸಿಬ್ಬಂದಿಗಳಿಗೆ/ ಕಾರ್ಯನಿರ್ವಹಿಸುವವರಿಗೆ, ಯಾರು*

---2

*ಕೋವಿಡ್-19 ಕಾರ್ಯಗಳಲ್ಲಿ ಪಾಲ್ಗೊಂಡಿರುತ್ತಾರೆ. ಅವರಿಗೆ ಕೆಲಸದಲ್ಲಿ ಮನೋಸ್ಥೈರ್ಯ ತುಂಬಲು, ಸರ್ಕಾರದ ವತಿಯಿಂದ, ಇವರುಗಳಲ್ಲಿ ಯಾರಾದರೂ ಈ ಕಾರ್ಯಚರಣೆಯಲ್ಲಿ ಕೋವಿಡ್-19 ರೋಗದಿಂದ ಮೃತರಾದಲ್ಲಿ ರೂ.30.00ಲಕ್ಷ ಪರಿಹಾರ ಒದಗಿಸಲು ಸರ್ಕಾರವು ಮಂಜೂರಾತಿ ನೀಡಿ ಆದೇಶಿಸಿದೆ."*

(ಪುರುಷೋತ್ತಮ್ ಸಿಂಗ್ ಬಿ.ಹೆಚ್)
ವಿಶೇಷಾಧಿಕಾರಿ (ಜಿ.ಪಂ) ಮತ್ತು ಪದನಿಮಿತ್ತ
ಸರ್ಕಾರದ ಉಪ ಕಾರ್ಯದರ್ಶಿ
ಆರ್ಥಿಕ ಇಲಾಖೆ

ಇವರಿಗೆ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು
3. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು.
4. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು.
5. ಸರ್ಕಾರದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು/ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್
6. ಸರ್ಕಾರದ ಎಲ್ಲಾ ಇಲಾಖಾ ಮುಖ್ಯಸ್ಥರುಗಳು.
7. ಶಾಖಾ ರಕ್ಷ ಕಡತ/ ಹೆಚ್ಚುವರಿ ಪ್ರತಿಗಳು.